ನರೇಂದ್ರ ಪೈ

# ಹೊಳೆದದ್ದು ತಾರೆ, ಉಳಿದದ್ದು ಆಕಾಶ...

2019ರ ಮ್ಯಾನ್‌ಬೂಕರ್ ಅಂತರರಾಷ್ಟ್ರೀಯ ಪ್ರಶಸ್ತಿ ಓಮನ್ ದೇಶದ ಲೇಖಕಿ ಜೋಕಾ ಅಲಹರ್ತಿಯ ಅರೇಬಿಕ್ ಕಾದಂಬರಿ 'ಸಿಲೆಸ್ಟಿಯಲ್ ಬಾಡೀಸ್'ಗೆ ಬಂದಿದೆ. ಈ ಕಾದಂಬರಿಯ ವೈಶಿಷ್ಟ್ಯ, ವಸ್ತು, ಪಾತ್ರಗಳ ಬಗ್ಗೆ ಸಮಗ್ರ ನೋಟವೊಂದು ಇಲ್ಲಿದೆ...

ಕಲ್ಲೋಪಂತ ಮತ್ತು ಕೃಷ್ಣಾಬಾಯಿಯರ ಮೂವರು ಹೆಮ್ಮಕ್ಕಳಾದ ಗಂಗಾ–ತುಂಗಾ ಮತ್ತು ನರ್ಮದಾರ ಬದುಕು ಹರಿದು ಸಾಗಿದ ಕತೆಯ ನೆನಪಿದೆಯೆ? ರಾಘವೇಂದ್ರ ಪಾಟೀಲರ 'ಮಾಯಿಯ ಮುಖಗಳು' ಕತೆಯ ಪಾತ್ರಗಳಿವು. ಈ ವರ್ಷದ (2019) ಮ್ಯಾನ್‌ಬೂಕರ್ ಅಂತರರಾಷ್ಟ್ರೀಯ ಪ್ರಶಸ್ತಿಗೆ ಪಾತ್ರವಾದ ಓಮನ್ ದೇಶದ ಹುಡುಗಿ ಜೋಕಾ ಅಲಹರ್ತಿಯ ಅರೇಬಿಕ್ ಕಾದಂಬರಿ 'ಸಿಲೆಸ್ಟಿಯಲ್ ಬಾಡೀಸ್' ಬಗ್ಗೆ ಮಾತನಾಡುವಾಗ ತಪ್ಪದೇ ನೆನಪಾಗುವ ಕತೆಯದು. ಮೊದಲಿಗೆ ಇದು ಕೂಡ ಮೂವರು ಹುಡುಗಿಯರ ಕತೆ ಎನ್ನುವ ವ್ಯಾಖ್ಯಾನ ಕೇಳಿ ಬಂದಿತ್ತು. ಕೆಲವರು ಇದನ್ನು ಓಮನ್‌ನಲ್ಲಿ ಈಗಲೂ ಚಾಲ್ತಿಯಲ್ಲಿರುವ ಗುಲಾಮಗಿರಿಯ ಕಥಾನಕ ಎಂದೂ ಕರೆದಿದ್ದರು. ಇದನ್ನೆಲ್ಲ ಅಲ್ಲಗಳೆಯಲಾಗದಿದ್ದರೂ ಇಡೀ ಕಾದಂಬರಿಯನ್ನು ಗಮನಿಸಿ ಹೇಳುವುದಾದರೆ ಇದು ಮೂವರು ಹುಡುಗಿಯರನ್ನು ಕೇಂದ್ರದಲ್ಲಿರಿಸಿಕೊಂಡಿರುವ ಕಥಾನಕವೇನೂ ಅಲ್ಲ. ಹಾಗೆಯೇ ಇಲ್ಲಿನ ಕಥಾಜಗತ್ತು ಓದುಗರಿಗೆ ಗುಲಾಮಗಿರಿಯ ಕಟು ಅನುಭವವನ್ನೂ ಕೊಡುತ್ತಿಲ್ಲ. ಗುಲಾಮಗಿರಿಯ ಕಟು ಅನುಭವ ಬೇಕೆಂದರೆ ನಾವು ಅಕ್ಸರ್ ಹೇಲಿಯ 'ರೂಟ್ಸ್', ಎಡುವರ್ಡೊ ಗೆಲಿಯಾನೊನ 'ಮೆಮರಿ ಆಫ್ ಫೈರ್' (ಎರಡೂ